# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಎರಡನೆಯ ಆವರ್ತಕ ಪರೀಕ್ಷೆ ಸೆಪ್ಟೆಂಬರ್ - 2020

ತರಗತಿ : 6 ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : 20

**(Use KANNADA H W Note Book to ANSWER)**

ವಿಭಾಗ ಎ (ವಾಚನ ಮತ್ತು ಗ್ರಹಿಕಾ ಕೌಶಲ) : 4 ಅಂಕಗಳು

1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಒಂದು ಕಾಡಿನಲ್ಲಿ ಒಂದು ಮೊಲ ವಾಸವಾಗಿತ್ತು. ಇದಕ್ಕೆ ಮೂರು ಮುದ್ದಾದ ಮರಿಗಳಿದ್ದವು. ಮೊದಲನೆಯವ ರಾಮ, ಎರಡನೆಯವನು ಭೀಮ, ಮೂರನೆಯವನು ಸೋಮ. ಮೂವರು ಬೆಳೆದು ದೊಡ್ಡವರಾದಾಗ ತಂದೆ ಮಕ್ಕಳೇ ನೀವು ದೊಡ್ಡವರಾಗಿದ್ದೀರಿ, ಇನ್ನು ಮುಂದೆ ನಿಮ್ಮ ಮನೆಗಳನ್ನು ನೀವು ಕಟ್ಟಿಕೊಂಡು ಸ್ವತಂತ್ರರಾಗಿ ಬಾಳಬೇಕು ಎಂದನು. ಮೂವರಿಗೂ ಬಹಳ ಸಂತೋಷವಾಯಿತು. ಬೇಗ ಬೇಗನೆ ಮನೆ ಕಟ್ಟಲು ಬೇಕಾದ ಎಲ್ಲಾ ವಸ್ತುಗಳನ್ನು ತಂದವು. ಆದರೆ ಮೂರನೆಯವ ಸೋಮ ತನಗೆ ಅವಶ್ಯಕ್ಕಿಂತ ಹೆಚ್ಚು ವಸ್ತುಗಳನ್ನು ತಂದಿತ್ತು. ತಂದೆ ಕೇಳಿದ್ದಕ್ಕೆ ನಾನು ಬಹಳ ದೊಡ್ಡಮನೆ ಕಟ್ಟಬೇಕು ಎಂದಿತು.

ಪ್ರಶ್ನೆಗಳು:
1) ಕಾಡಿನಲ್ಲಿಯಾರು ವಾಸವಾಗಿದ್ದರು? 1
2) ಬೆಳೆದು ದೊಡ್ಡವರಾದ ಮಕ್ಕಳಿಗೆ ತಂದೆ ಏನೆಂದು ಹೇಳಿದರು? 1
3) ಅವಶ್ಯಕ್ಕಿಂತ ಹೆಚ್ಚು ವಸ್ತುಗಳನ್ನು ತಂದಿದ್ದವರು ಯಾರು? 1
4) ಮೊದಲನೆಯವ ರಾಮ, ಎರಡನೆಯವನು ____ ಮೂರನೆಯವನು ಸೋಮ. 1

ವಿಭಾಗ -ಬಿ (ಬರವಣಿಗೆಯ ಕೌಶಲ) : 3 ಅಂಕಗಳು

2) ನಿಮ್ಮ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ವನ್ನು ಕುರಿತು ನಿಮ್ಮ ತಂದೆ/ತಾಯಿಗೆ ಒಂದು ಪತ್ರವನ್ನು ಬರೆಯಿರಿ. 3

ವಿಭಾಗ - ಸಿ (ಅನ್ವಯಿಕ ವ್ಯಾಕರಣ) : 5 ಅಂಕಗಳು

3) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:
1) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: 1) ದೇವಾಲಯ 2) ಚಳಿಯಿಂದ 2
2) ಈ ಪದಗಳಿಗೆ ದ್ವಿರುಕ್ತಿ ಪದಗಳನ್ನು ಬರೆಯಿರಿ: 1) ಬೇಗ 2) ದೊಡ್ಡ 1
3) ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ: 1) ಪೋಷಕರು 2) ಸಂಭ್ರಮ 2

ವಿಭಾಗ - ಡಿ (ಪಠ್ಯಗಳ ಅಧ್ಯಯನ) : 8 ಅಂಕಗಳು

4. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 6

1. ಸೂರ್ಯ ಏಕೆ ದುಡಿಯುತ್ತಿದ್ದಾನೆ?
ಎ) ಇಳೆಗೆ ಮಳೆ ತರಲು ಬಿ) ಆಕಾಶಕ್ಕೆ ಮಳೆ ತರಲು ಸಿ) ಆಹಾರ ಕೊಡಲು ಡಿ) ಶಾಖ ನೀಡಲು

2. ಭೂಮಿಯ ಪೋµಕ ಯಾರು?
ಎ) ಸೂರ್ಯ ಬಿ) ಆಕಾಶ ಸಿ) ಭೂಮಿ ಡಿ) ನಕ್ಷತ್ರ

3. ಸೂರ್ಯ ಮರೆಯದೆ ಯಾವ ಕರ್ತವ್ಯ ಮಾಡುವನು?
ಎ) ಬಂದು ಹೋಗುವ ಬಿ) ರಾತ್ರಿ ಬೆಳಕು ನೀಡುವ ಸಿ) ಇಳೆಗೆ ಬಿಸಿಲು ಬೆಳಕು ನೀಡುವ ಡಿ)ಏನನ್ನು ಮಾಡುವುದಿಲ್ಲ

4. ಬಿರು ಬಿಸಿಲಿಗೆ ಯಾವುವು ಕಂಗಾಲಾಗಿಲ್ಲ?
ಎ) ಮನುಷ್ಯರು ಬಿ) ಪ್ರಾಣಿ-ಪಕ್ಷಿಗಳು ಸಿ) ಮರ-ಗಿಡ, ಪೊದೆ-ಬಳ್ಳಿಗಳು ಡಿ) ಎಲ್ಲರೂ

4) ಬಿ.ಆರ್. ಲಕ್ಷ್ಮಣರಾವ್ ಅವರು ಎಲ್ಲಿ ಜನಿಸಿದ್ದಾರೆ?
ಎ) ನಾಗಮಂಗಲ ಬಿ) ಕೋಲಾರ ಸಿ) ಚಿಮಂಗಲ ಡಿ) ರಾಯಚೂರ

6) ಬೇಸಿಗೆ ಎಂಬ ಪದ್ಯವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ?
ಎ) ಸುಬ್ಬಾಭಟ್ಟರ ಮಗಳೇ ಬಿ) ಬಿಂದು ರಶ್ಮಿ ಸಿ) ಹನಿಗವಿತೆಗಳು ಡಿ) ವಿನೋದ ಕವಿತೆಗಳು

5) ಪದ್ಯವನ್ನು ಪೂರ್ಣಗೊಳಿಸಿರಿ: 2

1) ಬಂದಿದೆ ಬೇಸಿಗೆ _____________ ಹಾಡೋಣ

*****

**SEND THE PHOTO or PDF of this ANSWER SHEET to**

**Mr.H.K.Makari Sir on 8197183534**